Regd No B G 155 ಸ್ಥಾ ಸಂ 181(1) 7—10—1965

ಸತ್ಯವಾದಿ

49th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿನೆ ಸೀಸ್ತೇದಾರ್ ಎಂ ವಿ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ 2 ಪೈಸೆ

ಚಾಮುಂಡಿ ಬೆಟ್ಟದ ಜಾತ್ರೆಗೆ ಹೋಗುವವರಿಗೆ ಸೂಚನೆ

ಈ ತಿಂಗಳು 7 ನೇ ತಾರೀಖಿನಿಂದ 13 ನೇ ತಾರೀಖಿನ ವರೆಗೆ ಎಂಡು ದಿನಗಳೂ ಸೇರಿ ಚಾಮುಂಡಿ ಬೆಟ್ಟದ ಜಾತ್ರೆ ನಡೆಯಲು ನಿಗದಿ ಆಗಿದೆ ಚಾಮುಂಡಿ ಬೆಟ್ಟದ ಜಾತ್ರೆಗೆ ಹೋಗುವ ಯಾತ್ರಿಕರು ಕಾಲರಾ ನಿರೋಧ ಇಂಜಕ್ಷನ್ನನ್ನು ಹಾಕಿಸಿಕೊಳ್ಳಬೇಕಾದ್ದು ಅತ್ಯಗತ್ಯ ವಾಗಿದ್ದು ಹಾಗೆ ಹಾಕಿಸಿಕೊಂಡು ದಕ್ಕೆ ಸರ್ಟಿಫಿಕೇಟು ತೋರಿಸಬೇಕು. ಕಾಲರಾದಿಂದ ರಕ್ಷಿಸಲು ಚಾಮುಂಡಿ ಬೆಟ್ಟ ಮತ್ತು ಮೈಸೂರು ನಗರ ಆಸ್ಪತ್ರೆಗಳಲ್ಲಿ ಏರ್ಪಾಟು ಮಾಡಿದೆ.

★

25 ಮಿಲಿಯ ಡಾಲರು ವರಮಾನವನ್ನು ಮಾಡಬೇಕಾದದನ್ನು ಈ ತಿಂಗಳಿನಿಂದ ವಂಡಹಾಕಬೇಕೆಂದು ಭಾರತ ಮಾಡಿದ ಕೋರಿಕೆಯನ್ನು ಅಂತರರಾಷ್ಟ್ರೀಯ ಮಾನೇಟರಿ ಫಂಡು ಒಪ್ಪಿದೆ ಕೊಡಬೇಕಾದ ದಿನ ನಿಗದಿ ಆಗಿಲ್ಲ

★

ಮೈಸೂರು ರಾಜ್ಯದಲ್ಲಿ ಉಗ್ರಾಣಗಳೆಂದು ಕರೆಯಲಾಗುವ ಗೋದಾಮು ಗಳಿಗೆ ಕಂಗಳಿಗೆ ತಾತ್ಕಾಲಿಕ ಪರಿಹಾರ ರೂ 10 ಕೋಟ್ಟಿ ಧಾನ್ಯ ಕೊಡಿಲಾಗುವದಾಗಿ ರಾಜ್ಯದ ಹಣಕಾಸು ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ಸಿಸ್ಸಿಯಲ್ಲಿ ತಿಳಿಸಿದರು. ಈಗ ಆ ಸೇವಕರಿಗೆ ತುಟ್ಟಿಭತ್ಯ ಸೇರಿ ತಿಂಗಳಿಗೆ ರೂ 27 ದೊರೆಯುತ್ತಿದೆ

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಅಸ್ಥಾನವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿಸಂವರಿಂದ

ಶ ಶಾಕ್ಷ ಶ ಯೋದತಿ ಪೂರ್ವಾ

20 ಲಕ್ಷ ಅಂದಾಜು

ಮೈಸೂರು ರಾಜ್ಯದ ಗಾತ್ರವಾರು ಪ್ರದೇಶಗಳಿಗೆ ವಿದ್ಯುದ್ದೀಪ ವ್ಯವಸ್ಥೆಗೊಳಿಸಲು ರೂ ಇಪ್ಪತ್ತು ಲಕ್ಷ ಅಂದಾಜಾಗಿದೆ.

★

ವಿಷಮ ಪರಿಸ್ಥಿತಿ

ಕೊಯಮತ್ತೂರಿನಲ್ಲಿ ಸೇರಿದ್ದ ದಕ್ಷಿಣ ಭಾರತ ಬಟ್ಟೆ ಗಿರಣಿ ಸಂಘದವರ ಕಾರ್ಯಕಾರಿ ಸಮಿತಿ ನಿರ್ಣಯವನ್ನು ಅಂಗೀಕರಿಸಿ, ಗಿರಣಿಗಳಲ್ಲಿ ಬಟ್ಟೆಗಳ ಪಾಸ್ತಾನು ಹೆಚ್ಚಾಗಿದ್ದು ಪರಿಸ್ಥಿತಿ ವಿಷಮಿಸಿದೆಯೆಂದು, ಸರ್ಕಾರ ಕೊಟ್ಟಿರುವ ಪರಿಹಾರ ಈಗಿನ ಬಿಕ್ಕಟ್ಟನ್ನು ದಾಟುವುದಕ್ಕೆ ಸಾಕಾಗುವುದಿಲ್ಲವೆಂದು ತಿಳಿಸಿದೆ.

★

ಬುಟ್ಟೋಗೆ ಉತ್ತರ

ಪಾಕೀಸ್ತಾನಕ್ಕೆ ಬೀದು ಸಾವಿರ ವರ್ಷದ ಯುದ್ಧ ಬೇಕಾದರೆ ಭಾರತ ಎರಡು ಸಾವಿರ ವರ್ಷಗಳ ಪರೆಗೆ ಹೋರಾಡಲು ಸಿದ್ಧವಿದೆ ಎಂದು ಮೈಸೂರಿನ ಶಿಕ್ಷಣ ಮಂತ್ರಿ ಶ್ರೀ ಎಸ್ ಆರ್ ಕಂತಿಯವರು ಸಿಸ್ಸಿಯಲ್ಲಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

❀

ಯುದ್ಧ ರಂಗದಲ್ಲಿ ಗಾಯಗೊಂಡ ಜವಾನರಿಗೆ ರಕ್ತ ಕೊಡಲು ಕೇವಲದಲ್ಲಿ ಹನ್ನೆರಡು ಸಾವಿರ ಜನ ಮುಂದೆಬಂದಿರುವರು.

o o

ಅಲ್ಪ ವರಮಾನವಿರುವವರ ಮನೆ ನಿರ್ಮಾಣಕ್ಕೆ ಮದರಾಸು ಸರ್ಕಾರ ರೂ 20 ಲಕ್ಷ ನಿಗದಿ ಮಾಡಿದೆ

o o

ಭಾರತಕ್ಕೆ ಮಿತ್ರತ್ವ ಪ್ರಮಾಣದ ಸೀವೆ ಎಷ್ಟೊಂದನ್ನು ರಷ್ಯಾ ರಹಸ್ಯವಾಗಿ ಕಳಿಸುವದೆಂದು ಮಾಸ್ಕೋ ವಾರ್ತೆ ತಿಳಿಸುತ್ತದೆ.

'ಪ್ಲೆಬಿಸೈಟ್'

ಕಾಶ್ಮೀರಿಗಳ ವಿರೋಧ

★

ಪ್ರಮುಖ ಮಾರ್ಕೆಗಳು

ಇಂಫಾಲು— ಕಾಲಲ್ಲಾಂಗು ಗಾತ್ರದ ನಿವಾಸಿಗಳ ಮೇಲೆ ವಿಮಾನದಿಂದ ಬಾಂಬು ಪುಂಡು ಕದಾಡಿ ವಿಧಿಸಿದೆ.

❀

ಕಲ್ಕತ್ತ— ಅಗರಬಾನು ತಮ್ಮ ಭಾರತ ಆಸ್ತಿ ಯಾಯಿಗಳಿಗೆ— ನಿಮ್ಮ ದೇಶದಲ್ಲಿ ಭಕ್ತಿಯಿಡಿ, ಈ ಉಕ್ಕಟ ಸಮಯದಲ್ಲಿ ಸಂಕಲ್ಪಕ್ಕೆ ಸಕಲ ನೆವನ್ನೂ ನೀಡಿ ಎಂದು ಆದೇಶವಿತ್ತಿದಾರೆ

❀

ಪಣಜಿ— ಪುಟ್ಟದಾದ ಗೋವಾ ಕಬ್ಬಿಣದ ಅದುರು ರಫ್ತಿನಿಂದ ಕೇಂದ್ರಕ್ಕೆ ವರ್ಷಕ್ಕೆ ರೂ 25 ಕೋಟಿ ವಿದೇಶಿ ವಿನಿಮಯ ದೊರಕಿಸುತ್ತಿದೆ

★

ಶ್ರೀನಗರ— ಭಾರತ ವಶಪಡಿಸಿಕೊಂಡಿರುವ ಹಾಜಿ ಪೀರ್‌ನಿಂದ ಪಾಕಿಸ್ತಾನಿಗಳು ಪ್ರದಿಲ್ಲವೆಂದು ವರದಿಯಾಗಿದೆ

❀

ವಾಷಿಂಗ್ಟನ್— ಅಮೆರಿಕ ಸಂಸ್ಥಾನದ ಹೊಸ ವ್ಯಾಪಾರ ಭಾಗಕ್ಕೆ ಸೋಕೊರೊ ಸ್ಕೈಲರ್ ಎಂದು ಹೆಸರಿಡಲಾಗುವದೆಂದೂ, ಅವರು ಭಾರತ-ಪಾಕ್ ಕದನದಲ್ಲಿ ಪಾಕಿಸ್ತಾನಕ್ಕೆ ಮಾಡಿದ ಸಹಾಯದ ಕೃತಜ್ಞಾರ್ಥವಿದೆಂದೂ ಪ್ರಕಟವಾಗಿದೆ

❀

ಕೊಲಂಬೊ— ಭಾರತದ ಸುಪ್ರಸಿದ್ಧ ತಾರೆ ರಾಜಾ ಸಲೋಚನಳಿಗೆ ಮೊನ್ನೆ ಜಾಫ್ನಾನ ಜಿಲ್ಲಾ ಎಲಿಫೆಂಟು ಪಾಸಿನ ಆಳಿಯು ನಿವಾಸದಲ್ಲಿ ಆಳೆಗೆ ಸ್ವೀಕೃತ ವರ್ಷನೆ ಕೋರಿದ ಒಬ್ಬ ಸೈನ್ಯಾಧಿಕಾರಿಯು ಪ್ರಶ್ನಿಸಲ್ಪಟ್ಟು ಕೊರ್ಟ್ ಮಾರ್ಷಲ್ಲಾಗಲಾಗಿದೆ

ವಿಶ್ವಸಂಸ್ಥೆ— ಜಮ್ಮು ವಿಷಯ ಕಾಶ್ಮೀರದ ಜನತೆಯು ರಾಜ್ಯಾಂಗ ಸಭೆಯಲ್ಲಿಯೂ ಮತ್ತು ಎಂಡು ಜನಾವಣೆಗಳಲ್ಲಿಯೂ ತಮ್ಮ ಭವಿಷ್ಯವನ್ನು ನಿರ್ಧರಿಸಿಕೊಂಡಿದ್ದಾರೆ; ಪ್ಲಬಿಸೈಟು ಕೂಡದೆಂದು ಪುನಃ ಹೇಳತ್ತೇನೆ ಎಂದು ಜನಂಲ್ ಅಸೆಂಬ್ಲಿಯಲ್ಲಿ ಭಾರತ ಪ್ರತಿನಿಧಿ ಸಯದ್ ವಿಸಾರ್ ಕಾಸಿಂ ತಿಳಿಸಿದರು.

❀

ನವದೆಹಲಿ— ಸಿಕಿಂ ಗಡಿಯಲ್ಲಿ ಉದ್ರೇಕಗೊಳಿಸುವ ಯಾವ ಕಾರ್ಯಾಚರಣೆಯನ್ನು ನಡೆಸದಂತೆ ಮತ್ತೆ ಭಾರತವು ಚೀನಾಕ್ಕೆ ತಿಳಿಸಿದೆ

〓

ಜಕರ್ತ— ಕಮ್ಯೂನಿಸ್ಟರು ಮತ್ತು ದಂಗೆಗೋರ ಪಡೆಗಳು ಪುಧ್ಯ ಜಾವಾದಲ್ಲಿ ಪಾರಂಪ್ಯ ಹತ್ಯವಾಡಿವೆಯೆಂಬ್ಯ ವಂದಿಯಾಗಿದೆ

〓

ನವದೆಹಲಿ— ಪಂಜಾಬಿನಲ್ಲಿ ಈ ವರ್ಷ ನಾಲೆಗಳಲ್ಲಿ ನೀರಿನ ಅಭಾವದಿಂದ ವ್ಯವಸಾಯಗಾರರಿಗೆ ತೊಂದರೆಯಾಗಿರುವುದರಿಂದ ಪಾಕಿಸ್ತಾನಕ್ಕೆ ಇಂಡಸ್ಸಿನ ನೀರನ್ನು ನಿಲ್ಲಿಸಲು ಪಂಜಾಬು ಮುಖ್ಯ ಮಂತ್ರಿಯವರು ಮಾಡಿರುವ ಸಲಹೆಯನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ

〓

ಪಾಕಿಸ್ತಾನ ಅಕ್ರಮಿತ ಕಾಶ್ಮೀರದ ರಾಜಧಾನಿ ಎನಿಸಿಕೊಂಡಿದ್ದ ಮುಜಾಫರಬಾದು ದೆವ್ವ ಹಿಡಿದ ಪಟ್ಟಣವಾಗಿದೆ ಅಲ್ಲಿದ್ದವರೆಲ್ಲರೂ ಬೇರೆಕಡೆಗೆ ಹೊರಟು ಹೋಗಿ, ಅಲ್ಲಿ ಒಂದು ನಂಬಿಕೆಯೂ ಇಲ್ಲ

ಭಾರಿ ಪ್ರತಿಮೆ

ಪಶ್ಚಿಮ ಜರ್ಮನಿಯಲ್ಲಿನ ಟ್ರಿಟೋ ಬಾರ್ಗ್ ಅರಣ್ಯದಲ್ಲಿರುವ ಹರಿವಾಣ ಪ್ರತಿಮೆ ನೂರೆಪ್ಪತ್ತು ಅಡಿಗಳ ಎತ್ತರವಿದೆ ಈ ಅಗಾಧ ಕಲಾಕೃತಿ ನೋಡಲು ವಿಶ್ವದ ನಾನಾ ಭಾಗಗಳಿಂದ 2 ವಿ.ಲಿಯ ಜನರು ಬರುತ್ತಾರೆ ಈ ಪ್ರತಿಮೆ ಕೈಯಲ್ಲಿರುವ ಕತ್ತಿಯೇ 21 ಅಡಿ ಉದ್ದವಿದ್ದು ಸಾವಿರದ ಇನ್ನೂರು ಪೌಂಡು ತೂಕವಿದೆ

೦ ೦

ಬರದ ಭೀತಿ

ಈಗಿನಂತೆ ಆಹಾರ ಉತ್ಪತ್ತಿ ಕಾರ್ಯ ಅಲ್ಪವಾಗಿ ಮುಂದುವರಿದಲ್ಲಿ ಬರುವ ಐದಾರು ವರ್ಷಗಳಿಗೆ ಪ್ರಪಂಚದಲ್ಲಿ ಅತಿ ಹೆಚ್ಚಿನದಾದ ಸಂಪೆ ಇರುವ ಭಾಗದಲ್ಲಿ ಭಾರಿ ಕ್ಷಾಮ ಉಂಟಾಗುವುದೆಂದು ಎಂಡನೆ ವಿಶ್ವಜನ ಸಂಮೇಳನದಲ್ಲಿ ತಿಳಿಸಲಾಗಿದೆ

೦ ೦

ಸಂಬಿಳಿ ಕಡಿಮೆ

ಪಾಶ್ಚಾತ್ಯ ಶಕ್ತಿಗಳ ವಿಚಾರದಲ್ಲಿ ಭಾರತದ ಸಂಬಿಳಿ ಕಡಿಮೆ ಆಗುತ್ತಿದೆ ಎಂದೂ, ಸಾಲ ಎಷ್ಟೇ ಹೆಚ್ಚು ದೊರೆತರೂ ಇದುಲ್ಲಿ ಬದಲಾವಣೆ ಆಗುವಂತೆ ಕಂಡುಬರುವುದಿಲ್ಲವೆಂದೂ ಹೇಳಲಾಗಿದೆ

೦ ೦

ರಷ್ಯದ ನೆರವು

ನೈವೇಲಿ ಉಕ್ಕಿನ ಕಾರ್ಖಾನೆಗೆ ಬೇಕಾದ ಉಕ್ಕು ಮೊದಲಾದ ಪದಾರ್ಥಗಳನ್ನು ಕೊಡಲು ರಷ್ಯಾ ಒಪ್ಪಿದೆ

★

ಪ್ರಸಾದ ಸ್ವೀಕಾರ

ವೈಸೂರು ಶ್ರೀರಾಂಪೇಟೆಯಲ್ಲಿರುವ ಶ್ರೀ ಬ್ರಹ್ಮಚೈತನ್ಯ ಪ್ರಸನ್ನ ಶ್ರೀ ಲಾಯ ಮಂದಿರ ಕಾರ್ಯದರ್ಶಿಗಳು ಶ್ರೀ ಗಣಪತಿ ಪೂಜೆ ಸಂದರ್ಭದಲ್ಲಿ ಕಳು ಹಿಸಿದ ಪ್ರಸಾದವನ್ನು ಭಕ್ತಿಪೂರ್ವಕವಾಗಿ ಸ್ವೀಕರಿಸಿದ್ದೇವೆ

★

ರಷ್ಯದ ಹೇಳಿಕೆ

ಮಾಸ್ಕೊ— ರಷ್ಯಾದ ಸಂಬಂಧವು ಅನೇಕ ವಿದೇಶ ರಾಷ್ಟ್ರಗಳೊಡನೆ ಉತ್ತಮ ಗೊಳ್ಳುತ್ತಿದ್ದರೂ, ಅಮೆರಿಕಾ, ಬ್ರಿಟನ್ ಮತ್ತು ಚೀನಾಗಳೊಡನೆ ಹಾಗಿಲ್ಲವೆಂದ ರಷ್ಯಾ ತಿಳಿಸಿದೆ

ತುಳು ಗಾದೆಗಳು

ಪಡವಿನಲ್ಲಿ (ಎತ್ತರ ಪ್ರದೇಶದಲ್ಲಿ) ಕುಳಿತವನು ವಿಧಿಯನ್ನರಿಯುನು.
ಅಲ್ಪ ಇಲ್ಲದವನಿಗೆ ಹೆಂಡತಿ ಏಕೆ ?

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರು ಉಡಾರ ಅನುಗ್ರಹ ಕೃಪೆಯಾಗಿದೆ

ಕರ್ನಾಟಕದಲ್ಲಿ ಗೋರಕ್ಷಣೆ ಪ್ರಚಾರದಲ್ಲಿ, ತಾಪಾಹಾರ, ಪಶುವೈದ್ಯ ಎಚಾರ ಗಳನ್ನು ಉದ್ದಿಪ ವಿಶೇಷ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ ೫೦ ನೈಸೆ ಪೋಷಕರು ರೂ 10, ಪೋಷಕಾಜೀವರು ರೂ 25 : (ಒಂದು ಸಾರಿಯಾಗಿ)

ಗೋರಕ್ಷಣೆಗೆ ಲೇಖನಗಳನ್ನೂ ಪೋಷಕತ್ವದ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು, ಚಾಮರಾಜಪುರಂ, ಮೈಸೂರು ೪

ವುಡಲಾಂಡ್ಸ್

ಜನಪ್ರಿಯತೆ 2 ನೇ ವಾರ

ಶಿ ನ

ಆವೊ ಪ್ಯಾರ್ ಕರೆ (ಹಿಂದಿ)

ಶೆ

Aao Pyar Karen

ಜಾಯ್ ಮುಖರ್ಜಿ — ಸೈರಾ ಬಾನು ರವರ ಕಲಾತ್ಮಕ ನಟನೆ

ಆಕರ್ಷಣೀಯ ಅಭಿನಯದಿಂದ ಕೂಡಿದ ಸುಂದರ ಹಿಂದಿ ಚಿತ್ರ

ಪ್ರತಿ ದಿನ 3 ಪ್ರದರ್ಶನಗಳು

ಅಪೆರ— 1-10-65 ರಿಂದ

ಪತಿಜ್ಞಾ ಪಾಲನ (ತೆಲುಗು)

ಪಾತ್ರ— ಕಾಂತಾರಾವ್, ರಾಜನಾಲ, ಪದ್ಮನಾಭಂ, ರಾಜಶ್ರೀ, ವಿಜಯಲಕ್ಷ್ಮಿ

[ದಿನ 3 ಆಟಗಳು]

SHAKTI SUDHA

A Superb Tonic

Quality Printing — Neat Binding

Lakshminarasimha Press

Sivarampet, Mysore

ಆಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ಸಗಟ್ಟಾಗಿ ದೊರೆಯುತ್ತವೆ
ರೋಗಿಗಳಿಗೆ ಸಾಕ್ಷ್ಯ ಔಷಧಿ ಕೊಡಲಾಗುತ್ತದೆ

Protect the Cow

ಗೋಸಂರಕ್ಷಣೆ ಮುಖ್ಯವಾಣಿಯಲ್ಲಿ ಕಾರ್ಯಗಳು ಹೆಚ್ಚಾಗಿ ನಡೆಯಲಿ

Edited, Printed & Published by Dharma prachara niratha
M S Krishna Rao (Proprietor) at the Satyavadi Press
Chamarajapuram, Mysore 4